ಪಿ.ಡಬ್ಲ್ಯೂ:1

**ದಿನಾಂಕಃ09.12.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ.ಕೆ.ಎಸ್.ಆರ್. ವಕೀಲರಿಂದಃ**

ನಾನು ಈ ದಾವೆಯನ್ನು ಪ್ರತಿವಾದಿಗಳ ಮೇಲೆ ದಾಖಲಿಸಿರುತ್ತೇನೆ. ನಮ್ಮ ಕುಟುಂಬದ ಮೂಲ ಪುರುಷನ ಹೆಸರು ಬಸಪ್ಪ ಆಗಿರುತ್ತದೆ. ಬನಪ್ಪ ರವರಿಗೆ 2 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳೆಂದರೆ, 1 ಮತ್ತು 3 ನೇ ಪ್ರತಿವಾದಿಗಳಾಗಿರುತ್ತಾರೆ. ಹೆಣ್ಣು ಮಕ್ಕಳೆಂದರೆ, 2,4 ಮತ್ತು 5 ನೇ ಪ್ರತಿವಾದಿಗಳು ಆಗಿರುತ್ತಾರೆ. ಉಳಿದ ಇಬ್ಬರು ಹೆಣ್ಣು ಮಕ್ಕಳೆಂದರೆ ಮಲ್ಲಮ್ಮ ಮತ್ತು ಕಮಲಮ್ಮ ಯಾನೆ ಕಮಲಾಕ್ಷಮ್ಮ ಆಗಿರುತ್ತಾರೆ, ಅವರು ಮೃತಪಟ್ಟಿರುತ್ತಾರೆ. ಆ ಪೈಕಿ ಕಮಲಮ್ಮ ಅವರಿಗೆ ಮಕ್ಕಳಿರುವುದಿಲ್ಲ. ಮಲ್ಲಮ್ಮ ರವರಿಗೆ ಸುಧಾಕರ ಮತ್ತು ಶಂಕರ್ ಎಂಬ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಸದರಿ ಮಲ್ಲಮ್ಮ ರವರ ಮಕ್ಕಳಾದ ಸುಧಾಕರ್ ಮತ್ತು ಶಂಕರ್ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ. ಕಮಲಮ್ಮ ಅವರು ನನಗೆ ಅತ್ತೆಯಾಗಬೇಕು. ಕಮಲಮ್ಮ ಯಾನೆ ಕಮಲಾಕ್ಷಮ್ಮ ರವರು ಪರಮೇಶ್ವರಪ್ಪ ಎಂಬುವವರನ್ನು ಮದುವೆ ಆಗಿದ್ದರು ಅಂದರೆ ಸರಿ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ, ಪರಮೇಶ್ವರಪ್ಪನವರು ಕಮಲಮ್ಮ ಮೃತಪಟ್ಟ ನಂತರ ಮತ್ತೊಂದು ಮದುವೆಯಾಗಿದ್ದಾರೆ ಹಾಗಾಗಿ ಸೇರಿಸಿಲ್ಲ ಎಂದು ನುಡಿಯುತ್ತಾರೆ.

ಈ ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆ ದಾಖಲಿಸುವಾಗಿ ಜಮೀನು, ಮನೆ ಮತ್ತು ನಿವೇಶನದ ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆ. ಅದನ್ನು ಬಿಟ್ಟು ಬೇರೇನೂ ನೀಡಿರುವುದಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಏನೂ ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಂತರ ನಿಮ್ಮ ವಕೀಲರ ಬಳಿ ತಕರಾರಿನ ಬಗ್ಗೆ ತಿಳಿದುಕೊಂಡಿದ್ದೀರಾ? ಅಂದರೆ, ಸಾಕ್ಷಿಯು ನನ್ನ ತಾತ ಮೃತಪಟ್ಟು 20 ವರ್ಷಗಳಾಗಿವೆ, ಆದರೆ ಪ್ರತಿವಾದಿಗಳು ನನ್ನ ತಾತ ಇತ್ತೀಚೆಗೆ ಮೃತಪಟ್ಟಿರುವುದಾಗಿ ಸುಳ್ಳು ಮಾಹಿತಿ ನೀಡಿದ್ದಾರೆಂದು ನುಡಿಯುತ್ತಾರೆ. ನನ್ನ

ತಾತ 1999 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ, ನಿಖರವಾಗಿ ದಿನಾಂಕವನ್ನು ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ನನ್ನ ತಾತನಿಗೆ ಹೇಗೆ ಬಂದಿರುತ್ತದೆ ಎಂದು ನಾನು ಮೂಲ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಯಾವ ಯಾವ ಸರ್ವೇನಂಬರುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಆಸ್ತಿಗಳು ಇವೆ ಎಂದು ನನಗೆ ಮಾಹಿತಿ ಇದೆ. ನನ್ನ ತಂದೆ 1 ನೇ ಪ್ರತಿವಾದಿ ಈಗ ನನ್ನ ಚಿಕ್ಕಪ್ಪ 3 ನೇ ಪ್ರತಿವಾದಿಯೊಂದಿಗೆ ಹುಲಿಕೆರೆ ಗ್ರಾಮದಲ್ಲಿ ವಾಸವಾಗಿದ್ದಾರೆ. ನಾನು 3 ವರ್ಷಗಳ ಹಿಂದೆ ಮದುವೆಯಾಗಿದ್ದು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಅಂದರೆ ಸರಿ. ನನ್ನ ತಾಯಿ ಯಶೋದಮ್ಮ ರವರು ಅವರ ತಾಯಿ ಮನೆ ಜಾವೂರು-ಹೊಸಳ್ಳಿಯಲ್ಲಿ ವಾಸವಾಗಿದ್ದಾರೆ.

ದಾವಾ ಆಸ್ತಿಯಲ್ಲಿ ನನ್ನ ಅತ್ತೆ ಮೃತ ಮಲ್ಲಮ್ಮ ರವರ ಮಕ್ಕಳಾದ ಸುಧಾಕರ ಮತ್ತು ಶಂಕರ ಅವರಿಗೂ ಸಹ ಹಕ್ಕು ಇದೆ ಅಂದರೆ ಸರಿಯಲ್ಲ. ಮಲ್ಲಮ್ಮ ಅವರು ಸುಮಾರು 2010 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಕಮಲಮ್ಮ ಯಾನೆ ಕಮಲಾಕ್ಷಮ್ಮ ರವರು 2000 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಕಮಲಮ್ಮ ಯಾನೆ ಕಮಲಾಕ್ಷಮ್ಮ ರವರು ಗಂಡ ಪರಮೇಶ್ವರಪ್ಪ ರವರಿಗೂ ಸಹ ಈ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಅಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)

3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.